ಅ) ಶಿಗ್ಗಾಂವ ನಗರದಲ್ಲಿ ಮುನ್ಸೀಫ್ ಮತ್ತು ಜೆ.ಎಂ.ಎಫ್‌ಸಿ ನ್ಯಾಯಾಲಯ ತೆರೆಯುವ ಉದ್ದೇಶವೇನಾದರೂ ಸರ್ಕಾರದ ಮುಂದಿದೆಯೆ?

ಆ) ಹಾಗಿದ್ದಲ್ಲಿ, ಇನ್ನು ಎಷ್ಟು ದಿವಸಗಳಲ್ಲಿ ಸದರಿ ನ್ಯಾಯಾಲಯ ಪ್ರಾರಂಭವಾಗುವುದು?

ಶ್ರೀ. ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು):–

ಅ) ಹೌದು.

ಆ) ಸರ್ಕಾರ ಪರಿಶೀಲಿಸಿ ದೊರೆಯುವ ಸಂಪನ್ಮೂಲಗಳನ್ನು ಅನುಸರಿಸಿ, ಹೊಸ ನ್ಯಾಯಾಲಯಗಳನ್ನು ಪ್ರಾರಂಭಿಸಲಾಗುವುದು.

ಶ್ರೀ ಮಂಜುನಾಥ ಸಿ ಕುನ್ನೂರು : ಸನ್ಮಾನ್ಯ ಅಧ್ಯಕ್ಷರೆ, ಶಿಗ್ಗಾಂವ್ ನಗರದಲ್ಲಿ ಮುನ್ಸೀಫ್ ಜೆ.ಎಂ.ಎಫ್.ಸಿ. ನ್ಯಾಯಾಲಯ ತೆರೆಯಬೇಕೆಂದು ಕೇಳಿದ್ದೇನೆ. ಈ ಒಂದು ನ್ಯಾಯಾಲಯವನ್ನು ತೆರೆಯಬೇಕೆಂಬ ಉದ್ದೇಶ ಸುಮಾರು 7–8 ವರ್ಷಗಳಿಂದ ಸರ್ಕಾರಕ್ಕಿದ್ದರೂ, ಇಲ್ಲಿಯವರೆಗೆ ಪ್ರಾರಂಭ ಮಾಡಿಲ್ಲ. ಧಾರವಾಡ ಜಿಲ್ಲಾ ನ್ಯಾಯಾಧೀಶರು ಶಿಗ್ಗಾಂವ್ ನಗರದಲ್ಲಿ ಒಂದು ಕಟ್ಟಡವನ್ನು ನೋಡಿ ಈಗಾಗಲೇ ಇದರ ಬಗ್ಗೆ ಹೈಕೋರ್ಟ್‌ಗೆ ಶಿಫಾರಸ್ಸು ಮಾಡಿದ್ದಾರೆ. ಇದರ ಜೊತೆಗೆ ಮಂಜೂರಾದ 7–8 ಕೋರ್ಟ್‌ಗಳು ಬೇರೆ ಬೇರೆ ಕಡೆಯಲ್ಲಿ ಸ್ಥಾಪನೆಯಾಗಿದೆ. ಆದರೆ, ಶಿಗ್ಗಾಂವ್ ನಗರದಲ್ಲಿ ಈ ಕೋರ್ಟನ್ನು ಸ್ಥಾಪನೆ ಮಾಡುವುದಕ್ಕೆ ಏಕೆ ವಿಳಂಬವಾಗುತ್ತಿದೆ? ಇದಕ್ಕೆ ಮಾನ್ಯ ಕಾನೂನು ಮಂತ್ರಿಯವರು ದಯಮಾಡಿ ಉತ್ತರಿಸುವರೇ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು):– ಶಿಗ್ಗಾಂವ್‌ನಲ್ಲಿ ಮುನ್ಸೀಫ್ ಕೋರ್ಟ್ ಕೊಡಬೇಕೆಂಬ ಉದ್ದೇಶ ಇದೆ. ಈ ವರ್ಷ ಬಡ್ಜೆಟ್‌ನಲ್ಲಿ ಹಣದ ಅಭಾವವಿರುವುದರಿಂದ ಶಿಗ್ಗಾಂವ್‌ನಲ್ಲಿ ಈ ಕೋರ್ಟನ್ನು ಕೊಡಲಾಗಲಿಲ್ಲ. ಆದರೂ ಕೂಡ ಈ ವರ್ಷ ಮೂರು ಮುನ್ಸೀಫ್ ಕೋರ್ಟ್‌ಗಳನ್ನು ಕೊಡುತ್ತಿದ್ದೇವೆ. ಒಂದು ದಕ್ಷಿಣ ಕನ್ನಡ ಜಿಲ್ಲೆಗೆ, ಎರಡನೆಯದು ಕೋಲಾರಕ್ಕೆ ಹಾಗೂ ಮೂರನೆಯದು ಸಂಡೂರಿಗೆ. ಆದ್ಯತೆ ಮೇಲೆ ಶಿಗ್ಗಾಂವ್‌ನಲ್ಲಿ ಮುನ್ಸೀಫ್ ಕೋರ್ಟನ್ನು ಪ್ರಾರಂಭಮಾಡಲು ಕ್ರಮವನ್ನು ತೆಗೆದುಕೊಳ್ಳಲಾಗುವುದು ಎಂಬ ಆಶ್ವಾಸನೆಯನ್ನು ಈ ಸಂದರ್ಭದಲ್ಲಿ ನಾನು ಕೊಡಲಿಚ್ಛೆಸುತ್ತೇನೆ.

ಶ್ರೀ ಮಂಜುನಾಥ್ ಸಿ. ಕುನ್ನೂರು : ಮಾರ್ಚ್ ತಿಂಗಳೊಳಗಾಗಿ ಶಿಗ್ಗಾಂವ್‌ನಲ್ಲಿ ಮುನ್ಸೀಫ್ ಕೋರ್ಟನ್ನು ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಶಿವಣ್ಣ:– ಆಯಿತು, ಪರಿಶೀಲಿಸುತ್ತೇನೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸಾಲ ಸೌಲಭ್ಯ

641. ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ):– ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಮಾಗಡಿ ತಾಲ್ಲೂಕಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಸಾಲದ ಮಂಜೂರಾತಿ ಪಡೆದಿರುವ ಜನಗಳ ಸಂಖ್ಯೆ ಎಷ್ಟು;

ಆ) ಯಾವ ಆಧಾರದ ಮೇಲೆ ಸಾಲವನ್ನು ಮಂಜೂರು ಮಾಡಲಾಗಿದೆ?

ಶ್ರೀ. ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು):–

ಅ) 1989–90ನೇ ಸಾಲಿನಲ್ಲಿ 106 ಜನರು ಸಾಲದ ಮಂಜೂರಾತಿ ಪಡೆದಿರುತ್ತಾರೆ.

ಆ) ಬಡತನದ ರೇಖೆಯಿಂದ ಕೆಳಗಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರನ್ನು ನಿಗಮ ಆಯ್ಕೆ ಮಾಡಿದ ಗೊಂಚಲು ಗ್ರಾಮಗಳಲ್ಲಿ ಬ್ಯಾಂಕ್ ಅಧಿಕಾರಿಗಳ ಹಾಗೂ ನಿಗಮದ ಅಧಿಕಾರಿಗಳ ಜೊತೆ ಜಂಟಿಯಾಗಿ ನಿಗಮದ ನಿಯಮಾವಳಿಗಳ ಪ್ರಕಾರ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ ಅವರಿಗೆ ಬ್ಯಾಂಕ್ ಹಾಗೂ ನಿಗಮದಿಂದ ಸೌಲಭ್ಯ ಒದಗಿಸಲಾಗಿದೆ.

ಶ್ರೀ ಹೆಚ್.ಎಂ. ರೇವಣ್ಣ : ಸನ್ಮಾನ್ಯ ಅಧ್ಯಕ್ಷರೇ, ಸರ್ಕಾರ ನೂರಾರು ಕೋಟಿ ರೂಪಾಯಿಗಳನ್ನು ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದ ಅಭಿವೃದ್ಧಿ ನಿಗಮದಲ್ಲಿ ತೊಡಗಿಸಿದ್ದು ಮಾಗಡಿ ತಾಲ್ಲೂಕ್‌ನಲ್ಲಿ ಕೇವಲ ನೂರಾರು ಜನರಿಗೆ ಮಾತ್ರ ಈ ಸಾಲದ ಸೌಲಭ್ಯವನ್ನು ಒದಗಿಸಿದ್ದಾರೆ, ಇರುವಂಥ ಪ್ರಜಾಸಂಖ್ಯೆಗನುಗುಣವಾಗಿ ಈ ಸಾಲ ವಿತರಣೆಯಾಗಿಲ್ಲ. ಈ ನಿಗಮದಲ್ಲಿ ವಿತರಣೆಯಾಗದೆ ಪ್ರತಿ ವರ್ಷವೂ ಸಾಕಷ್ಟು ಹಣ ಉಳಿಯುತ್ತಿದೆ. ಆದುದರಿಂದ ಈ ನಿಗಮದ ಸಂಬಂಧಪಟ್ಟ ಅಧಿಕಾರಿಗಳನ್ನು ಚುರುಕುಗೊಳಿಸಿ, ಸರ್ಕಾರ ಯಾವ ಉದ್ದೇಶದಿಂದ ಈ ನಿಗಮದಲ್ಲಿ ಹಣವನ್ನು ತೊಡಗಿಸಿದೆಯೋ, ಅದು ಸದ್ವಿನಿಯೋಗವಾಗುವುದಕ್ಕೆ ಕ್ರಮಗಳನ್ನು ತೆಗೆದುಕೊಳ್ಳುವರೇ ಎಂದು ಸರ್ಕಾರವನ್ನು ಕೇಳಬಯಸುತ್ತೇನೆ.

ಶ್ರೀ ಬಿ. ಶಿವಣ್ಣ :– ಮಾಗಡಿ ತಾಲ್ಲೂಕಿಗೆ ಸಾಕಷ್ಟು ಹಣವನ್ನು ಕೊಟ್ಟಿದ್ದೇವೆ. ಮಾನ್ಯ ಸದಸ್ಯರದ್ದು ಅಂಥ ಸ್ಪೆಸಿಫಿಕ್ ಕಂಪ್ಲೇಂಟ್ ಏನಾದರೂ ಇದ್ದರೆ, ಆದಷ್ಟು ಬೇಗನೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್.ಎಂ. ರೇವಣ್ಣ :– ಈ ಸಾಲವನ್ನು ನೇರವಾಗಿ ಅಭಿವೃದ್ಧಿ ನಿಗಮದಿಂದ ಕೊಡುತ್ತಿಲ್ಲ. ಯಾವುದಾದರೂ ಒಂದು ರಾಷ್ಟ್ರೀಕೃತ ಬ್ಯಾಂಕಿನ ಮೂಲಕ ಕೊಡಲಾಗುತ್ತಿದೆ. ಈ ಬ್ಯಾಂಕ್‌ಗಳು ರಾಜ್ಯ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುವುದಿಲ್ಲ ಅಭಿವೃದ್ಧಿ ನಿಗಮದವರು ಯಾವದೇ ಒಂದು ಸಾಲವನ್ನು ಮಂಜೂರು ಮಾಡಿಕಳುಹಿಸಿಕೊಟ್ಟರೂ ಕೂಡ, ಬ್ಯಾಂಕಿನ ಯಾವುದಾದರೂ ಒಂದು ಶಾಖೆಯಲ್ಲಿ ಅದು ಡಿಲೇ ಆಗುತ್ತದೆ, ಬ್ಯಾಂಕ್‌ನವರು ಇದರ ಬಗ್ಗೆ ಸಹಕರಿಸುತ್ತಿಲ್ಲ. ಆದುದರಿಂದ, ಇದರ ಬಗ್ಗೆ ತುರ್ತು ಕ್ರಮವನ್ನು ತೆಗೆದುಕೊಳ್ಳುತ್ತೀರಾ?

ಶ್ರೀ ಬಿ. ಶಿವಣ್ಣ :– ಮೊದಲೇ ಬ್ಯಾಂಕ್‌ಗೆ ಈ ಸಾಲ ಮಂಜೂರಾತಿಯ ಬಗ್ಗೆ ಡೈರಕ್ಷನ್ ಕೊಟ್ಟಿರುತ್ತೇವೆ. ಇನ್ನು ಮುಂದೆ ಇಂಥ ತೊಂದರೆಗಳೇನಾದರೂ ಬಂದಲ್ಲಿ, ಬ್ಯಾಂಕಿನ ಅಫಿಷಿಯಲ್ಸ್ ಜೊತೆ ಮಾತನಾಡಿ ಸಮಸ್ಯೆಯನ್ನು ಬಗೆಹರಿಸುತ್ತೇವೆ.

ಶ್ರೀ ಎಂ. ವೆಂಕಟೇಶ್ :– ರಾಜ್ಯದಲ್ಲಿ ಈ ಪರಿಶಿಷ್ಟ ವರ್ಗದ ನಿಗಮ ಇದೆಯೆಂದೇ ಎಷ್ಟೋ ಜನಗಳಿಗೆ ಗೊತ್ತಿಲ್ಲ. ಸಾಲ ಕೊಡುತ್ತೇವೆಂದು ಪತ್ರಿಕೆಗಳ ಮೂಲಕ ಪ್ರಚಾರ ಮಾಡಿದರು. ಎಲ್ಲರೂ ತಮಗೆ ಸಾಲ ಸಿಗುವುದೆಂದು ಅರ್ಜಿಯನ್ನು ಹಾಕಿದರು. ಹಲವಾರು ಯೋಜನೆಗಳಿದ್ದರೂ ಇವರು ಕೊಡುವುದು ಮಾತ್ರ ಬಹಳ ಕಡಿಮೆ. ಒಂದು ತಾಲ್ಲೂಕಿನಿಂದ 1000 ಅರ್ಜಿಗಳು ಬಂದರೆ, 500 ಜನ ಅರ್ಜಿಗಳನ್ನು ಹಾಕಿದ್ದಲ್ಲಿ, ಇವರು ಸಾಲ ಕೊಡುವುದು ಮಾತ್ರ 10 ಜನಗಳಿಗೆ. ಹೀಗಾದರೆ ಹೇಗೆ? ಪರಿಶಿಷ್ಟ ಜಾತಿಗೆ ಸೇರಿದ ಜನರು ತಮಗೆ ಸಾಲ ಸಿಗುವುದೆಂದು ಅರ್ಜಿಗಳನ್ನು ಹಾಕುತ್ತಾರೆ, ಇಲಾಖೆಯವರು ಇಂಟರ್‌ವ್ಯೂಗೆ ಕರೆದು ಒಂದು ತಾಲ್ಲೂಕಿಗೆ 5–10 ಜನರನ್ನು ಸೆಲೆಕ್ಟ್ ಮಾಡುತ್ತಾರೆ. ಇದರಿಂದ ಪರಿಶಿಷ್ಟ ವರ್ಗದ ಜನರಿಗೆ ಬಹಳ ಅನ್ಯಾಯವಾಗುತ್ತಿದೆ. ಆದುದರಿಂದ ಈ ಪರಿಶಿಷ್ಟ ನಿಗಮಕ್ಕೆ ಸರ್ಕಾರ ಹೆಚ್ಚಿನ ಸಬ್ಸಿಡಿಯನ್ನು ಬಿಡುಗಡೆ ಮಾಡಬೇಕು ಹಾಗೂ ಬ್ಯಾಂಕ್‌ನವರ ಜೊತೆ ಸಮಾಲೋಚನೆ ಮಾಡಿ ಪರಿಶಿಷ್ಟ ವರ್ಗದ ಜನರಿಗೆ ಹೆಚ್ಚು ಹೆಚ್ಚು ಸಾಲ ಸೌಲಭ್ಯ ಸಿಗುವಂತೆ ಮಾಡಬೇಕೆಂದು ಮಾನ್ಯ ಸಮಾಜ ಕಲ್ಯಾಣ ಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಶಿವಣ್ಣ :– ಪರಿಶೀಲಿಸುತ್ತೇನೆ.

ಚು.ಪ್ರ. 179 (579ಎ)

ಉಪಾಧ್ಯಕ್ಷೆಣಿಯವರು :– ಮಾನ್ಯ ಸದಸ್ಯರ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಉತ್ತರವನ್ನು ಒದಗಿಸಲು ಕಾಲಾವಕಾಶವನ್ನು ಕೇಳಿದ್ದಾರೆ.

ಚು.ಪ್ರ. 180 (596)

ಶ್ರೀ ಬಿ. ಶಿವಣ್ಣ :– ಮಾನ್ಯ ಉಪಾಧ್ಯಕ್ಷಣಿಯವರೆ, ಮಾನ್ಯ ಸದಸ್ಯರು ಡಿ.ಪಿ.ಎ.ಆರ್.ಗೆ ಸಂಬಂಧ ಪಟ್ಟಂತೆ ಪ್ರಶ್ನೆಯನ್ನು ಕೇಳಿದ್ದಾರೆ. ಆದ್ದರಿಂದ ಇದನ್ನು ಡಿಪಿಎ.ಆರ್.ಗೆ ಟ್ರಾನ್ಸ್‌ಫರ್ ಮಾಡಲಾಗಿದೆ. ಕಾಲಾವಕಾಶ ಬೇಕಾಗುತ್ತದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಇಂಥ ಪ್ರಶ್ನೆಗೂ ತಾವು ಟೈಂ ಕೇಳಿದರೆ ಹೇಗೆ? ನಾನು ಬಹಳ ನೊಂದ ಮನಸ್ಸಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಈ ವಿಚಾರ ಇಲ್ಲಿ ಹಲವಾರು ಸಾರಿ ಈ ಸದನದಲ್ಲಿ ಪ್ರಸ್ತಾಪವಾಗಿದೆ. ಈ ವಿಚಾರದಲ್ಲಿ ನಾವು ಡೈರೆಕ್ಷನ್ ಕೊಟ್ಟಿದ್ದೇವೆಂದು ಹೇಳಿದ್ದೀರಿ. ಆದರೆ ಇದುವರೆಗೂ ನೀವು ಕ್ರಮವನ್ನು ತೆಗೆದುಕೊಳ್ಳದಿದ್ದರೆ ಏನು ಮಾಡಬೇಕು?

ಶ್ರೀ ಎಂ.ಪಿ. ವೆಂಕಟೇಶ್ : ಹಿಂದೆ ಇದೇ ಸದನದಲ್ಲಿ ಈಗಿನ ಕಂದಾಯ ಸಚಿವರೇ ಈಪ್ರಶ್ನೆಯನ್ನು ಕೇಳಿ, ಯಾವ ಯಾವ ಇಲಾಖೆಯಲ್ಲಿ ಎಷ್ಟೆಷ್ಟು ಹುದ್ದೆಗಳು ಖಾಲಿ ಇವೆ? ಇವುಗಳನ್ನು ತುಂಬಲು ಆದೇಶ ಕೊಟ್ಟಿದ್ದೀರಾ ಎಂದು ಕೇಳಿದ್ದರು. ಎಲ್ಲೆಲ್ಲಿ ವೇಕೆನ್ಸಿಗಳಿವೆ ಅಲ್ಲಿ ಈ ಅಭ್ಯರ್ಥಿಗಳನ್ನು ಫಿಲಪ್ ಮಾಡಿ ಎಂದು ಡೈರೆಕ್ಷನ್ ಕೊಟ್ಟಿದ್ದೇವೆಂದು ಹೇಳಿದ್ದರು. ಆದರೂ ಇನ್ನೂ ಫಿಲಪ್ ಆಗಿಲ್ಲ.